ನಿಯಮ 334ರ ಮೇರೆಗೆ

1. ಗುಲ್ಬರ್ಗಾ ಜಿಲ್ಲೆಯ, ಸೇಡಂ ತಾಲ್ಲೂಕಿನ ಮುಧೋಳ ನ್ಯಾಯಬೆಲೆ ಅಂಗಡಿ ನಂ. 36ಕ್ಕೆ ಮತ್ತೆ ಡೀಲರ್‌ಷಿಪ್ ಕೊಟ್ಟಿರುವ ವಿಚಾರ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಮುಧೋಳ ನ್ಯಾಯ ಬೆಲೆ ಅಂಗಡಿ ನಂ. 36. ಡೀಲರ್ ಅವ್ಯವಹಾರ ಮಾಡಿದ್ದು, ಡೀಲರ್‌ಷಿಪ್ ರದ್ದು ಪಡಿಸಲಾಗಿತ್ತು. ಬೇರೆಯವರನ್ನು ನೇಮಕಾತಿಗಾಗಿ ತಹಶೀಲ್ದಾರ ಹಾಗೂ ಸ್ಥಳೀಯ ಪ್ರಜಾಪ್ರತಿನಿಧಿಗಳು ಶಿಫಾರಸ್ ಮಾಡಿದ್ದು, ಅದನ್ನು ಕಡೆಗಣಿಸಿ, ಸಹಕಾರ ಸಂಘಗಳ ನಿಬಂಧಕರ ವರದಿಯನ್ನೂ ಕೇಳದೇ, ಮುಧೋಳ ನೇಕಾರರ ಸಹಕಾರ ಸಂಘದವರಿಗೆ ನ್ಯಾಯಬೆಲೆ ಅಂಗಡಿಯ ಡೀಲರ್‌ಷಿಪ್ ಕೊಡಲಾಗಿದೆ. ಈ ಕೈಮಗ್ಗ ನೇಕಾರರ ಸಹಕಾರ ಸಂಘ, ಮುಧೋಳ 1989-90ನೇ ಸಾಲಿನಲ್ಲಿ 26.464 ರೂಪಾಯಿ 99 ಪೈಸೆ ಹಾನಿಯಲ್ಲಿರುತ್ತದೆಂದೂ, ಸಂಘದ ಕೆಲಸವು ಸ್ಥಗಿತಗೊಂಡಿದೆಯೆಂದೂ, ಯಾವ ಬ್ಯಾಂಕಿನಲ್ಲಿಯೂ ಸಹ ಇದರ ತೇಪಣಿ ಪಣ ಇಲ್ಲವೆಂದು ಸಹಕಾರ ನಿಬಂಧಕರು, ಸೇಡಂ ಅವರ ಪತ್ರ ಸಂಖ್ಯೆ:ಎಸ್:2 ಎಸ್ 5 ಕೆಮಿಸಿ 91-92. ದಿನಾಂಕ 6-3-92ರಂದು ತಿಳಿಸಿದ್ದಾರೆ. ಸ್ಥಗಿತಗೊಂಡಿರುವ ಈ ಸಂಘ ಅಲ್ಲಿಯ ನಾಗರೀಕರಿಗೆ ಆಹಾರಧಾನ್ಯ ಇತ್ಯಾದಿ ಸರಬರಾಜು ಮಾಡದೇ ಒಬ್ಬ ವ್ಯಕ್ತಿಗೆ ಲಾಭಕ್ಕಾಗಿ, ಈ ಡೀಲರ್‌ಷಿಪ್ ಕೊಟ್ಟಿದ್ದು ತಪ್ಪಲ್ಲವೇ? ಇದರಿಂದ ಅಲ್ಲಿಯ ನಾಗರೀಕರಿಗೆ ಆಹಾರಧಾನ್ಯ ಸರಬರಾಜು ತೊಂದರೆಯಿಂಟಾಗಿ, ವರ್ಷಾನುಗಟ್ಟಲೆ ಆಹಾರಧಾನ್ಯ ಸಿಗುವುದೆ ಆಗುವುದಿಲ್ಲವೇ? ಇದನ್ನು ತಪ್ಪಿಸಲು ಸಹಕಾರ ನಿಬಂಧಕರ ವರದಿಯನ್ನು ಪರೀಕ್ಷಿಸಿ, ತಕ್ಷಣವೇ ನೇಕಾರರ ಸಂಘಕ್ಕೆ ನೀಡಿದ ಡೀಲರ್‌ಷಿಪ್‌ನ್ನು ರದ್ದುಗೊಳಿಸಿ, ಅಥವಾ ತದ್ವಿರುದ್ಧವಾಗಿ ನೀಡಿ, ಸ್ಥಳೀಯರ ಶಿಫಾರಸ್ಸು ಮೇರೆಗೆ ನ್ಯಾಯಬೆಲೆ ಅಂಗಡಿಯ ಡೀಲರ್‌ಷಿಪ್‌ನ್ನು ಕೊಟ್ಟು ಅಲ್ಲಿಯ ನಾಗರೀಕರಿಗೆ ಆಹಾರಧಾನ್ಯ ಇತ್ಯಾದಿ ಸರಬರಾಜು ಮಾಡುವ ವ್ಯವಸ್ಥೆ ಮಾಡುವಿರೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ಸಂಬಂಧಪಟ್ಟ ಮಂತ್ರಿಗಳಿಂದ ಒದಗಿಸಿಕೊಡುತ್ತೇನೆ.

2. ಬೆಂಗಳೂರು ನಗರದ ಗಾಂಧೀನಗರ ಕ್ಷೇತ್ರದಲ್ಲಿರುವ ಪೋಲೀಸ್ ವಸತಿಗೃಹಗಳ ಕಾಲೋನಿಗೆ ನಾಗರಿಕ ಸೌಲಭ್ಯ.

ಶ್ರೀ ಆರ್. ದಯಾನಂದರಾವ್ (ಗಾಂಧೀನಗರ) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಗಾಂಧೀನಗರ ಕ್ಷೇತ್ರದಲ್ಲಿ ಆನಂದರಾವ್ ವೃತ್ತದ ಬಳಿ ಒಂದು ಪೋಲೀಸ್ ಕಾಲೋನಿ ಇದೆ. ಇದು ಸುಮಾರು ಇಪ್ಪತ್ತು ವರ್ಷ ಹಳೆಯದು. ಇಲ್ಲಿ 400 ರಿಂದ 500 ಮನೆಗಳಿವೆ. ಇಲ್ಲಿ ಸರಿಯಾದ ರಸ್ತೆ ಮತ್ತು ದೀಪಗಳು ಇಲ್ಲ. ಇಲ್ಲಿಯ ರಸ್ತೆಗಳು ಡಾಂಬರ್ ಕಂಡು ಸುಮಾರು ವರ್ಷಗಳಾಗಿವೆ. ಇಲ್ಲಿಯ ನಿವಾಸಿಗಳಿಗೆ ಸರಿಯಾದ ರಸ್ತೆ ಮತ್ತು ಬೀದಿ ದೀಪಗಳಿಲ್ಲದೆ ಹೆಂಗಸರು ಮತ್ತು ಮಕ್ಕಳು ಓಡಾಡುವುದಕ್ಕೆ ತುಂಬಾ ತೊಂದರೆ ಆಗಿದೆ. ಈ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ? ಲೋಕೋಪಯೋಗಿ ಇಲಾಖೆಯವರ ಗಮನಕ್ಕೆ ತಂದರೂ ಸಹ ಸೂಕ್ತ ಪರಿಹಾರ ದೊರಕಿಲ್ಲ. ಮಾನ್ಯ ಮಂತ್ರಿಗಳು ಈ ಬಗ್ಗೆ ಸೂಕ್ತ ಚರ್ಚೆಗೆ ನೀಡಬೇಕೆಂದು ಕೋರುತ್ತೇನೆ ಮತ್ತು ಇದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ರೂಪಿಸಬೇಕೆಂದು ಕಳಕಳಿಯಿಂದ ವಿನಂತಿಸುತ್ತೇನೆ.